ಶ್ರೀ ಎಚ್. ಎಸ್. ಸಿದ್ದಪ್ಪ.—ಗ್ರಾಮಪಂಚಾಯತಿಗಳ ಮೂಲಕ ಹಂಚುವ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದೀರಿ. ಅರಸೀಕೆರೆ ತಾಲ್ಲೂಕಿನಲ್ಲಿ ಅನೇಕ ಸಹಕಾರ ಸಂಘಗಳು ಕೆಲಸ ಮಾಡುತ್ತಾ ಇಲ್ಲ. ಅಲ್ಲಿ ಮಾರ್ಕೆಟಿಂಗ್ ಸೊಸೈಟಿಯವರು ನೇರವಾಗಿ ಬ್ಲಾಕ್‌ಮಾರ್ಕೆಟ್ ಮಾಡುತ್ತಾರೆ. ಅಲ್ಲ ಕಡ್ಡಾಯವಾಗಿ ಗ್ರಾಮಪಂಚಾಯತಿಗಳಿಗೆ ಕೊಟ್ಟು ಅವುಗಳ ಮುಖಾಂತರ ನಕ್ಕರೆ ಗ್ರಾಮಾಂತರ ಪ್ರದೇಶಗಳಿಗೆ ದೊರೆಯುವ ಹಾಗೆ ಮಾಡುತ್ತೀರಾ?

ಶ್ರೀಮತಿ ಇ. ಇ. ವಾಫ್.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸಲಾಗುವುದು.

Construction of Tank near Rangayyana Durga

179. Sri PATEL PAPA NAIK (Molakalmuru).—

Will the Minister for Public Works and Electricity be pleased to state:—

(*a*) whether representations have been received by the Government for construction of a tank near Rangayyana Durga in Molakalmuru Taluk ;

(*b*) whether survey work, plans and estimates have been prepared in this behalf ;

(*c*) if so, whether Government has accorded sanction to them ;

(*d*) if so, when the construction work of this tank would be taken up ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) Survey work has been completed and plans and estimates are not ready.

(*c*) and (*d*) Do not arise in view of reply to clause (*b*).

ಶ್ರೀ ಪಟೇಲ್ ಪಾಪನಾಯಕ್.—ಸಮೀಕ್ಷೆ ಕಾರ್ಯ ಮುಗಿದಿದೆ ಎಂದು ಹೇಳಿದ್ದೀರಿ. ಅಲ್ಲ ಕೂಡಲೇ ಕೆರೆ ಕಟ್ಟಿ ಅಲ್ಲಿಂದ ಜನರಿಗೆ ಹೆಚ್ಚಿನ ಉಪಯೋಗ ಆಗುವ ಕಾರ್ಯ ಮಾಡಿ ಕೊಡುತ್ತೀರಾ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೋಸ್ಕರವಾಗಿಯೇ ಸರ್ವೆ ಮಾಡಿ ಅಂದಾಜು ತಯಾರಾಗಿದೆ. ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಪಟೇಲ್ ಪಾಪನಾಯಕ್.—ಅದರಿಂದ ಎಷ್ಟು ಎಕರೆ ನೀರಾವರಿ ಆಗಬಹುದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರಿಂದ 7 ಸಾವಿರ ಎಕರೆ ಸೆಮಿ ಡ್ರೈ ಕ್ರಾಪಿಗೆ ನೀರು ಒದಗುತ್ತದೆ. ಜೊತೆಗೆ ಅಲ್ಲಿ ಇರತಕ್ಕ 3750 ಎಕರೆಗೆ ಭದ್ರತೆಯನ್ನು ಕೊಡುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಇಲ್ಲ ಸಮೀಕ್ಷೆ ಕಾರ್ಯ ಮುಗಿದಿದೆ, ನಕ್ಷೆ ಮತ್ತು ಅಂದಾಜುಗಳು ತಯಾರಾಗಿಲ್ಲ ಎಂದು ಹೇಳಿದ್ದೀರಿ. ಈ ಕೆರೆಯನ್ನು ಕಟ್ಟುವುದಕ್ಕೆ ಮನವಿ ಯಾವಾಗ ಬಂತು, ಸಮೀಕ್ಷೆ ಯಾವಾಗ ಮಾಡಿದ್ದೀರಿ ಮತ್ತು ಯಾವಾಗ ಇದನ್ನು ಪೂರೈಸುವುದಕ್ಕೆ ಯೋಜನೆ ಇಟ್ಟುಕೊಂಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮನವಿ ಬಹಳ ಕಾಲದ ಹಿಂದೆ ಬಂತು. ಹತ್ತಾರು ವರ್ಷಗಳಿಂದ ಈ ಕೆರೆ ಕಟ್ಟಬೇಕೆಂದು ಕೇಳುತ್ತಿದ್ದರು. 1966ನೇ ಇಸವಿಯಲ್ಲಿ ಪ್ರಥಮಭಾರಿ ಅಂದಾಜು

(ಶ್ರೀ ಎಚ್. ಎಂ. ಚನ್ನಬಸಪ್ಪ)

ತಯಾರು ಮಾಡರಾಯಿತು. ಆಗ್ಗೆ 2 ಸಾವಿರ ಎಕರೆಗೆ ನೀರು ಒದಗುವಂತೆ ಸ್ಕೀಮ್ ಪ್ರಪೋಸ್ ಮಾಡಿದ್ದರು. ಇದಕ್ಕಿಂತ ಇನ್ನೂ 20 ಮೈಲಿ ಕೆಳಮಟ್ಟದಲ್ಲಿ ಕಟ್ಟಿದರೆ, ಹೆಚ್ಚಿನ ಜಮೀನು ವ್ಯವ ಸಾಯ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಕಂಡುಬಂದಮೇಲೆ ಪುನರ್‌ಪರಿಶೀಲನೆ ಮಾಡಿ 20 ಮೈಲಿ ಕೆಳಗೆ ಕೆರೆ ಕಟ್ಟಲು ಒಂದು ಅಂದಾಜು ತಯಾರು ಮಾಡಿದೆ. ಇದರ ಬಗ್ಗೆ ಎಲ್ಲಾ ಮಾಹಿತಿಗಳು ಒದಗಿವೆ. ಕೃಷ್ಣಾನದಿ ವಿವಾದದ ಬಗ್ಗೆ ತೀರ್ಪು ಬಂದಮೇಲೆ, ಇದನ್ನು ಶೀಘ್ರವಾಗಿ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡುತ್ತೇವೆ.

Construction of Vijayanagar Anecut in Siruguppa Taluk

184. **Sri B. E. RAMAIAH** (Siruguppa).—

Will the Minister of State for Major Irrigation be pleased to state:—

(*a*) whether there is a proposal to construct Vijayanagar anicut near Kenchanagudda in Siruguppa Taluk ;

(*b*) if so, whether the plans and estimates are ready ?

(*c*) when this anecut is expected to be ready ?

Sri H. N. NANJE GOWDA (Minister of State for Major Irrigation).—

(*a*) A scheme has been investigated.

(*b*) Plans and estimates have been prepared.

(*c*) The matter is under examination.

ಶ್ರೀ ಬಿ. ಇ. ರಾಮಯ್ಯ.—ನಕ್ಷೆ ಹಾಗೂ ಅಂದಾಜುಗಳನ್ನು ತಯಾರಿಸರಾಗಿದೆ ಎಂದು ಹೇಳಿದ್ದೀರಿ. ಇದರ ಅಂದಾಜು ವೆಚ್ಚ ಎಷ್ಟಾಗಬಹುದು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಇದಕ್ಕೆ 1965ನೇ ಇಸವಿಯಲ್ಲಿ ರೀ-ಮಾಡಲಿಂಗ್ ಮತ್ತು ಚಾನಲ್ ಕೆಲಸವನ್ನು ಸುಮಾರು 10 ಲಕ್ಷದ 54 ಸಾವಿರ ರೂಪಾಯಿಗಳ ಖರ್ಚಿನಲ್ಲಿ ಮಾಡಿ ಮುಗಿಸ ರಾಗಿದೆ, ಹೊಸದಾಗಿ ಆಣೆಕಟ್ಟನ್ನು ಕಟ್ಟುವ ಬಗ್ಗೆ ಸುಮಾರು 55 ಲಕ್ಷ ರೂಪಾಯಿಗಳ ಅಂದಾಜನ್ನು ತಯಾರು ಮಾಡರಾಗಿದೆ. ಆದರೆ ಈ ಭಾಗದಲ್ಲಿ ಈಗಾಗಲೇ ಸುಮಾರು 12 ಆಣೆಕಟ್ಟುಗಳಿರುವುದ ರಿಂದ, ಈ ಆಣೆಕಟ್ಟನ್ನು ಸಹ ಕಟ್ಟುವುದರಿಂದ ಹೆಚ್ಚಿನ ಜಮೀನಿಗೆ ನೀರಾವರಿಯಾಗುವುದಿಲ್ಲ. ಮತ್ತು ಇರತಕ್ಕಂಥ ನಾಲೆಗಳಿಗೆ ತುಂಗಭದ್ರಾ ಯೋಜನೆಯ ಸೀಪೇಜ್ ವಾಟರ್ ಬರುವ ಕಾರಣದಿಂದ ಸರ್ಕಾರದವರು ಇವುಗಳಿಗಾಗಿ ವಿಪರೀತ ಹಣವನ್ನು ಖರ್ಚುಮಾಡಿ ಹೊಸದಾಗಿ ಕಟ್ಟುವುದನ್ನು ಕೈಬಿಡಬೇಕೆಂದು ತೀರ್ಮಾನ ಮಾಡಿದ್ದಾರೆ.

ಶ್ರೀ ಬಿ. ಇ. ರಾಮಯ್ಯ.—ಇದು ವಿಜಯನಗರದ ಅರಸರು ಕಟ್ಟಿಸಿದ್ದು. ಈಗ ಬಹಳ ಶಿಥಿಲ ವಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಈಗ ಹೊಸದಾಗಿ ಕಟ್ಟುವುದಕ್ಕಾಗುವುದಿಲ್ಲ. ಇರುವುದನ್ನು ರಿಪೇರಿ ಮಾಡಿಸಲು ಸೂಕ್ತ ಕಾರ್ಯಕ್ರಮ ಕೈಕೊಳ್ಳರಾಗುತ್ತದೆ.

ಶ್ರೀ ಬಿ. ಇ. ರಾಮಯ್ಯ.—55 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಹೊಸದಾಗಿ ಕಟ್ಟಿಸು ವುದು ಶಕ್ಯವಿಲ್ಲ ಎಂಬುದಾಗಿ ಚೆಕ್ನಿಕಲ್ ಒಪೀನಿಯನ್ ಬಂದಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?